ಯಾರು ಒಂದು 'ಹದ್ದ್' ಗೆ (ಶರೀಅತ್ ದಂಡನೆಗೆ) ಗುರಿಯಾಗುತ್ತಾನೋ, ಮತ್ತು ಅವನಿಗೆ ಈ ಪ್ರಪಂಚದಲ್ಲಿಯೇ ಶೀಘ್ರವಾಗಿ ಶಿಕ್ಷೆ ನೀಡಲಾಗುತ್ತದೆಯೋ, ಅಲ್ಲಾಹು ತನ್ನ ಆ ದಾಸನಿಗೆ ಪರಲೋಕದಲ್ಲಿ ಎರಡನೇ ಬಾರಿ ಶಿಕ್ಷೆ ವಿಧಿಸುವುದಕ್ಕಿಂತ ಹೆಚ್ಚು ನ್ಯಾಯವಂತನಾಗಿದ್ದಾನೆ

ಅಲೀ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರು ಒಂದು 'ಹದ್ದ್' ಗೆ (ಶರೀಅತ್ ದಂಡನೆಗೆ) ಗುರಿಯಾಗುತ್ತಾನೋ, ಮತ್ತು ಅವನಿಗೆ ಈ ಪ್ರಪಂಚದಲ್ಲಿಯೇ ಶೀಘ್ರವಾಗಿ ಶಿಕ್ಷೆ ನೀಡಲಾಗುತ್ತದೆಯೋ, ಅಲ್ಲಾಹು ತನ್ನ ಆ ದಾಸನಿಗೆ ಪರಲೋಕದಲ್ಲಿ ಎರಡನೇ ಬಾರಿ ಶಿಕ್ಷೆ ವಿಧಿಸುವುದಕ್ಕಿಂತ ಹೆಚ್ಚು ನ್ಯಾಯವಂತನಾಗಿದ್ದಾನೆ. ಹಾಗೆಯೇ, ಯಾರು ಒಂದು 'ಹದ್ದ್' ಗೆ ಗುರಿಯಾಗುತ್ತಾನೋ, ಮತ್ತು ಅಲ್ಲಾಹು ಅದನ್ನು ಅವನಿಗೆ ಮರೆಮಾಚಿ, ಅವನನ್ನು ಕ್ಷಮಿಸುತ್ತಾನೋ (ಅವನಿಗೆ ಈ ಜಗತ್ತಿನಲ್ಲಿ ಶಿಕ್ಷೆ ನೀಡುವುದಿಲ್ಲವೋ), ಅಲ್ಲಾಹು ತಾನು ಈಗಾಗಲೇ ಕ್ಷಮಿಸಿದ ವಿಷಯದ ಬಗ್ಗೆ ಪುನಃ ಶಿಕ್ಷಿಸುವುದಕ್ಕಿಂತ ಹೆಚ್ಚು ಉದಾರಿಯಾಗಿದ್ದಾನೆ".
[حسن] [رواه الترمذي وابن ماجه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ವಿವರಿಸುವುದೇನೆಂದರೆ, ಯಾರು ಶರೀಅತ್ ಪ್ರಕಾರ 'ಹದ್ದ್' ಗೆ (ದಂಡನೆಗೆ) ಗುರಿಯಾಗುವ ಪಾಪಗಳನ್ನು, ಉದಾಹರಣೆಗೆ ವ್ಯಭಿಚಾರ ಮತ್ತು ಕಳ್ಳತನದಂತಹ ಪಾಪವನ್ನು ಮಾಡುತ್ತಾನೋ, ಮತ್ತು ಅವನು ಶಿಕ್ಷೆಯನ್ನು ಪಡೆದು ಈ ಪ್ರಪಂಚದಲ್ಲಿ ಅವನ ಮೇಲೆ 'ಹದ್ದ್' ಜಾರಿಗೊಳಿಸಲಾಗುತ್ತದೆಯೋ; ಖಂಡಿತವಾಗಿಯೂ ಆ 'ಹದ್ದ್' ಅವನ ಆ ಪಾಪವನ್ನು ಅಳಿಸಿಹಾಕುತ್ತದೆ ಮತ್ತು ಪರಲೋಕದಲ್ಲಿ ಅದರ ಶಿಕ್ಷೆಯನ್ನು ರದ್ದುಗೊಳಿಸುತ್ತದೆ. ಏಕೆಂದರೆ ಅಲ್ಲಾಹು ತನ್ನ ದಾಸನ ಮೇಲೆ ಎರಡು ಶಿಕ್ಷೆಗಳನ್ನು ಜೊತೆಗೂಡಿಸಲಾರ. ಅವನು ಅದಕ್ಕಿಂತ ಹೆಚ್ಚು ಉದಾರಿ ಮತ್ತು ಕರುಣಾಮಯಿಯಾಗಿದ್ದಾನೆ. ಹಾಗೆಯೇ, ಯಾರನ್ನು ಅಲ್ಲಾಹು ಈ ಪ್ರಪಂಚದಲ್ಲಿ (ಶಿಕ್ಷೆಗೆ ಗುರಿಯಾಗದ ರೀತಿಯಲ್ಲಿ ಅವನ ಪಾಪವನ್ನು) ಮರೆಮಾಚುತ್ತಾನೋ, ಮತ್ತು ಆ ಪಾಪಕ್ಕಾಗಿ ಅವನನ್ನು ಶಿಕ್ಷಿಸುವುದಿಲ್ಲವೋ, ಮತ್ತು ಅಲ್ಲಾಹು ಅವನ ಆ ಪಾಪವನ್ನು ಮನ್ನಿಸುತ್ತಾನೋ ಮತ್ತು ಕ್ಷಮಿಸುತ್ತಾನೋ; ತಾನು ಈಗಾಗಲೇ ಕ್ಷಮಿಸಿದ ಮತ್ತು ಮನ್ನಿಸಿದ ಆ ಪಾಪಕ್ಕೆ ಪುನಃ ಶಿಕ್ಷಿಸುವುದಕ್ಕಿಂತಲೂ ಅವನು ಹೆಚ್ಚು ಉದಾರಿಯಾಗಿದ್ದಾನೆ.

http://www.sunnah.global/hadeeth/kn/show/66211